ಮಾಡುತ್ತಿರಲಿಲ್ಲ, ಅದಕ್ಕೋಸ್ಕರವಾಗಿ ರೆಕ್ಟಿಫೈಡ್ ಸ್ಪಿರಿಟ್ ಕೊಡಬಾರದೆಂದು ನಿರ್ಧಾರವಾಯಿತು. ಈ 67 ಘಟಕಗಳಲ್ಲಿ ಅಂಥವುಗಳು ಏನಾದರೂ ಪುನಃ ಸೇರಿವೆಯೇ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೇ, ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಬೇಕು. ಆದರೂ ಕೂಡ ಯಾವ ಯಾವ ಘಟಗಗಳಿಗೆ ಎಷ್ಟಷ್ಟು ರೆಕ್ಟಿಫೈಡ್ ಸ್ಪಿರಿಟ್ ನಾವು ಕೊಡುತ್ತಿದ್ದೇವೆ, ಅವುಗಳಲ್ಲಿ ಎಲ್ಲೆಲ್ಲಿ ತಯಾರು ಮಾಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಾಗ ಎನ್‌ಫೋರ್ಸ್‌ಮೆಂಟ್ ಸೆಲ್ ಅದಕ್ಕಾಗಿಯೇ ಇದೆ, ಅವರು ಹೋಗುತ್ತಾರೆ ತನಿಖೆ ಮಾಡುತ್ತಾರೆ. ಆದರೆ ತಾವು ಪ್ರತ್ಯೇಕವಾಗಿ ಎಷ್ಟು ಘಟಕಗಳು ಎಂದು ಕೇಳಿರುವುದರಿಂದ 67 ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ನಾವು ಏನು ಕೊಡುತ್ತಿದ್ದೇವೆ ಅವು ಸರಿಯಾಗಿ ಮಾಡುತ್ತಿದೆಯೇ ಅಥವಾ ಅದಕ್ಕೆ ನಿಲ್ಲಿಸಿದ್ದೀರಾ ಎಂದು ಕೇಳುತ್ತಿದ್ದೀರಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ವಿಶ್ವಾಂತಯ್ಯ:- ತಾವು ಈಗ ಏನು 67 ರೆಕ್ಟಿಫೈಡ್ ಸ್ಪಿರಿಟ್ ಘಟಕಗಳಿಗೆ ಕೊಡುತ್ತಿದ್ದೀರಿ, ಆ ಪೈಕಿ ಈ ಹಿಂದೆ ಸರಿಯಾಗಿ ಉಪಯೋಗಿಸಿಲ್ಲವೆಂದು ವಜಾಮಾಡಲ್ಪಟ್ಟ ಘಟಕಗಳು ಸೇರಿದೆಯೇ?

ಅಧ್ಯಕ್ಷರು:- ರಾಜ್ಯದಲ್ಲಿ ರಾಸಾಯನಿಕ ಘಟಕಗಳು ಎಷ್ಟಿವೆ? ಇವುಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಒಂದೊಂದು ಘಟಕಕ್ಕೆ ಸರ್ಕಾರ ಯಾವ ರೀತಿ ಮತ್ತು ಎಷ್ಟೆಷ್ಟು ನೀಡುತ್ತಿದೆ? ಇವುಗಳಿಂದ ತಯಾರಾದ ವಸ್ತುಗಳು ಎಲ್ಲೆಲ್ಲಿ ಮಾರಾಟವಾಗುತ್ತಿವೆ ಎಂದು ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ. ಈ ಪ್ರಶ್ನೆಯ ಜೊತೆಯಲ್ಲಿ ಈ ರೆಕ್ಟಿಫೈಡ್ ಸ್ಪಿರಿಟ್ ಮಿಸ್‌ಯೂಸ್ ಮಾಡಿದರು ಅಥವಾ ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲವೆಂದು ಸೇರಿಸಿಬಿಟ್ಟಿದ್ದರೆ ನಿಮ್ಮ ಪ್ರಶ್ನೆಗೆ ಆಧಾರವಾಗುತ್ತಿತ್ತು.

ಶ್ರೀ ಹೆಚ್. ವಿಶ್ವಾಂತಯ್ಯ:- ಎರಡನೇ ಪ್ರಶ್ನೆಯಲ್ಲಿ, ಇವುಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಒಂದೊಂದು ಘಟಕಕ್ಕೆ ಸರ್ಕಾರ ಯಾವ ರೀತಿ ಮತ್ತು ಎಷ್ಟೆಷ್ಟು ನೀಡುತ್ತಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಅದಕ್ಕೆ ಪೂರಕವಾಗಿ ಮತ್ತೊಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ತಾವು 67 ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತೇವೆಂದರೆ, ಯಾವ ರೀತಿ ಕೊಡುತ್ತಿದ್ದೀರಿ? ಒಂದು ಸಾರಿ ಸರ್ಕಾರ ಕೊಡಬಾರದೆಂದು ತೀರ್ಮಾನಮಾಡಿ ಯಾರು ವಜಾ ಮಾಡಲ್ಪಟ್ಟಿದ್ದಾರೆ ಅಂಥವರು ಯಾರಾದರೂ ಈ ಪಟ್ಟಿಯಲ್ಲಿ ಸೇರಿದ್ದಾರೆಯೇ?

MR. SPEAKER:– He needs notice to answer this question.

ಶ್ರೀ ಧರ್ಮಸಿಂಗ್:- ಅದನ್ನು ವೆರಿಫೈ ಮಾಡುತ್ತೇನೆ.

ರಾಜ್ಯದಲ್ಲಿನ ಭಯೋತ್ಪಾದಕ ಹಾವಳಿಯನ್ನು ಎದುರಿಸುವುದು

110(566) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್.ಟಿ.ಟಿ.ಇ. ಹಾವಳಿ, ಭಯೋತ್ಪಾದಕರ ಹಾವಳಿ ಹಾಗೂ ವಿಧ್ವಂಸಕ ಶಕ್ತಿಗಳನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಮೇಲ್ಕಂಡವರ ಹಾವಳಿಯಿಂದ ಸಾರ್ವಜನಿಕ ಪ್ರಾಣ ಆಸ್ತಿ ನಷ್ಟಕ್ಕೆ ಸರ್ಕಾರ ಕಳೆದ ಎರಡು ವರ್ಷಗಳಿಂದ ಕೊಟ್ಟಿರುವ ಪರಿಹಾರ ಎಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು.):-

ಅ) ರಾಜ್ಯದಲ್ಲಿ ಎಲ್.ಟಿ.ಟಿ.ಇ. ಗಳ ಬಗ್ಗೆ ನಿಗಾ ಇಟ್ಟಿರುವುದರ ಜೊತೆಗೆ ನೀರಾವರಿ ಅಣೆಕಟ್ಟುಗಳಿಗೆ ಹಾಗೂ ಪ್ರಮುಖ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆಯನ್ನು ಒದಗಿಸಿದ್ದು, ಎಲ್.ಟಿ.ಟಿ.ಇ. ಗಳ ಚಟುವಟಿಕೆಯ ಬಗ್ಗೆ ಮಾಹಿತಿಯನ್ನು ಒದಗಿಸಲು ಐಜಿಪಿ ರಾಜ್ಯ ಗುಪ್ತವಾರ್ತೆಯವರ ಕಚೇರಿಯಲ್ಲಿ ಒಂದು ವಿಶೇಷ ಶೆಲ್ಲನ್ನು ಪ್ರಾರಂಭಿಸಲಾಗಿರುತ್ತದೆ. ಐಜಿಪಿ, ಕೆ.ಎಸ್.ಆರ್.ಪಿ. ಯವರ ನೇತೃತ್ವದಲ್ಲಿ ಮೂರು ಪ್ಲಾಟೂನ್‌ಗಳ ಒಂದು ವಿಶೇಷ ದಳವನ್ನು (ಸ್ಪೆಷಲ್ ಟಾಸ್ಕ್ ಫೋರ್ಸ್) ಎಲ್.ಟಿ.ಟಿ.ಇ. ಮಿಲೆಟೆಂಟ್ಸ್‌ಗಳನ್ನು ಬಗ್ಗು ಬಡಿಯುವ ಸಲುವಾಗಿ ರಚಿಸಲಾಗುತ್ತಿದೆ. ಇದಲ್ಲದ

ರಾಜ್ಯದಲ್ಲಿ ಅನಧಿಕೃತವಾಗಿ ತಂಗಿರಬಹುದಾದ ಎಲ್.ಟಿ.ಟಿ.ಇ. ದುಷ್ಕರ್ಮಿಗಳನ್ನು ಪತ್ತೆ ಮಾಡುವ ಸಲುವಾಗಿ ರಾಜ್ಯದಲ್ಲಿನ ಎಲ್ಲಾ ಶ್ರೀಲಂಕಾ ತಮಿಳರನ್ನು ನೋಂದಣಿ ಮಾಡಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಅಲ್ಲದೇ ಆಂಟಿ ಟೆರರಿಸ್ಟ್ ಸ್ಕ್ವಾಡ್, ಇಂಟರ್ನಲ್ ಸೆಕ್ಯೂರಿಟಿ ಫಾರ್ ಡ್ಯಾಮ್ಸ್, ವಿ.ಐ.ಪಿ. ಸೆಕ್ಯೂರಿಟಿ ಬುಲೆಟ್ ಪ್ರೂಫ್ ಕಾರ್ ಬಾಂಬ್ ಡಿಸ್ಪೋಸಲ್ ಉಪಕರಣ ಹೀಗೆ ಈ ಸ್ಕ್ವಾಡ್‌ನ್ನು ಬಲಪಡಿಸಲು 8 ಕೋಟಿ 65 ಲಕ್ಷ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಮಂಜೂರಾತಿಗೂ ಸಹ ಕಳುಹಿಸಲಾಗಿದೆ.

ಆ) ದಿನಾಂಕ 21–7–1990 ರಂದು ಬೀದರ್‌ನಲ್ಲಿ ಉಂಟಾದ ಬಾಂಬ್ ಸ್ಫೋಟ್‌ದಲ್ಲಿ ನೊಂದವರಿಗೆ ನೀಡಿದ ಪರಿಹಾರದ ಮೊಬಲಗು.

ನೀಡಿದ ಪರಿಹಾರ

ಮೃತಪಟ್ಟವರ ಸಂಖ್ಯೆ - 10 ರೂ.2,00,000–00

ಗಾಯಗೊಂಡವರ ಸಂಖ್ಯೆ - 138 ರೂ.4,15,000–00

ಶ್ರೀ ಜಿ. ರಾಜುಗೌಡ:- ಮಾನ್ಯ ಅಧ್ಯಕ್ಷರೇ, ಎಲ್‌ಟಿಟಿಇ ಮತ್ತು ಭಯೋತ್ಪಾದಕರು ಸಾಗೂ ವಿಧ್ವಂಸಕ ಶಕ್ತಿಗಳ ಹಾವಳಿಯಿಂದ ರಾಜ್ಯವು ಯಾವ ಯಾವ ಪ್ರಮುಖರಿಗೆ ರಕ್ಷಣೆಯನ್ನು ಒದಗಿಸಲಾಗಿದೆ. ಶ್ರೀಲಂಕ ತಮಿಳರ ಎಷ್ಟು ಜನರನ್ನು ನೋಂದಾಯಿಸಿದ್ದೀರಿ? ಅವರ ಸಂಖ್ಯೆ ಎಷ್ಟು? ಈ ಕಾರ್ಯಕ್ರಮ ಮುಗಿಯಲಿಕ್ಕೆ ಇನ್ನು ಎಷ್ಟು ದಿವಸಗಳ ಕಾಲಾವಕಾಶ ಬೇಕಾಗುತ್ತದೆ. ಬೀದರ್‌ನಲ್ಲಿ ಉಂಟಾಗಿರತಕ್ಕಂಥ ಸ್ಫೋಟದ ಮಾಹಿತಿ ರಾಜ್ಯ ಗುಪ್ತದಳಕ್ಕೆ ಮೊದಲೇ ದೊರಕಲಿಲ್ಲವೇ ದೊರೆತ್ತಿದ್ದರೆ ತಾವು ಬಾಂಬ್ ಸ್ಫೋಟವನ್ನು ಏತಕ್ಕೆ ತಡೆಗಟ್ಟಲಿಲ್ಲ. ಒಂದು ವೇಳೆ ಬಾಂಬ್ ಸ್ಫೋಟನೆಯನ್ನು ತಡೆಗಟ್ಟಲು ವಿಫಲವಾಗಿದ್ದರೆ ನಮ್ಮ ಗುಪ್ತ ವಾರ್ತಾ ಸಂಸ್ಥೆ ಸರಿಯಾದ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಲಿಲ್ಲವೆಂದು ಹೇಳೋಣವೇ?

ಶ್ರೀ ಧರ್ಮಸಿಂಗ್:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯದಲ್ಲಿ ಶ್ರೀಲಂಕ ತಮಿಳರನ್ನು ರಿಜಿಸ್ಟರ್ ಮಾಡತಕ್ಕಂಥ ರೀತಿಯಲ್ಲಿ, ಎಷ್ಟು ಜನರು ಬರುತ್ತಿದ್ದಾರೆನ್ನತಕ್ಕಂಥದ್ದನ್ನು ಕೂಡ ಒಂದು ರಿಜಿಸ್ಟರ್ ಮಾಡಬೇಕೆಂದು ಸರ್ಕಾರ ಒಂದು ನಿರ್ಣಯ ತೆಗೆದುಕೊಂಡು ಮೂರುಸಾವಿರದ ಎಂಟನೂರ ಎರಡು ಜನರನ್ನು ರಿಜಿಸ್ಟರ್ ಕೂಡ ಮಾಡಿದೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೈಸೂರು ಭಾಗದಿಂದ ಬಂದಿದ್ದಾರೆ. ಎಲ್‌ಟಿಟಿಇ ಆಕ್ಟಿವಿಟೀಸ್ ಬಗ್ಗೆ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಬಿಗಿಯಾದ ಕ್ರಮವನ್ನು ತೆಗೆದುಕೊಂಡಿದೆ ಮತ್ತು ಇಂಟಲಿಜೆನ್ಸ್ ವಿಂಗ್ ಕೂಡ ಅದರಲ್ಲಿ ಸರಿಯಾಗಿ ಕೆಲಸ ಮಾಡಿದರೆ ಒಳ್ಳೆಯದು. ಅದರ ಪರಿಣಾಮವಾಗಿ ಮಾನ್ಯ ರಾಜೀವ್ ಗಾಂಧಿಯನ್ನು ಕೊಲೆ ಮಾಡಿದ ಶಿವರಾಸನ್ ಕೂಡ ಇದ್ದ ಎಂದು ಬೆಂಗಳೂರು ನಗರ ಮತ್ತು ಬೇರೆ ಬೇರೆ ಕಡೆಗಳನ್ನು ಕೂಡ ನಾವು ಐಡೆಂಟಿಫೈ ಮಾಡಿದ್ದೇವೆ. ಇವತ್ತು ಮಂಡ್ಯದಲ್ಲಿ ಬರತಕ್ಕಂಥದ್ದಾಗಲಿ, ತಮಗೂ ಕೂಡ ಗೊತ್ತಿದೆ. ಇಂದಿರಾನಗರದಲ್ಲಿ ಎಲ್ಲೆಲ್ಲಿ ಈ ಆಕ್ಟಿವಿಟೀಸ್ ಪ್ರಾರಂಭವಾಗಿ ಅಲ್ಲಿ ಅವರು ಕೂಡ ಶರಣು ಹೊಂದಿದ್ದಾರೆಂಬ ವರ್ತಮಾನ ಕೂಡ ಸರ್ಕಾರಕ್ಕೆ ಬಂದ ಮೇಲೆ ಬಿಗಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಒಮ್ಮೆ ಶಿವರಾಸನ್‌ನನ್ನು ಹಿಡಿದು ಮತ್ತು ಬೇರೆ ಕಡೆಯಲ್ಲಿ ಅಂದರೆ ಮಂಡ್ಯ ಮತ್ತು ಇಂದಿರಾನಗರದಲ್ಲಿರತಕ್ಕಂಥ ಜನರನ್ನು ಹಿಡಿದಮೇಲೆ ಇವತ್ತು again we have anticipated. ಎಲ್ಲೆಲ್ಲಿ ಎಲ್‌ಟಿಟಿಇ ಆಕ್ಟಿವಿಟೀಸ್ ಬರಬಹುದು, ಪ್ರಾರಂಭವಾಗಬಹುದು ಎನ್ನುವ ರೀತಿಯಲ್ಲಿ ಸೆನ್ಸಿಟೀವ್ ಏರಿಯಾದಲ್ಲಿ ಐಡೆಂಟಿಫೈ ಮಾಡಿ, ಅಲ್ಲಿ ಕೂಡ ಸರ್ಕಾರ ಬಿಗಿ ಕ್ರಮವನ್ನು ಮಾಡಿದೆ. ಇರಿಗೇಷನ್ ಪ್ರಾಜೆಕ್ಟ್ ಏರಿಯಾದಲ್ಲೂ ಕೂಡ ಪೋಲೀಸ್ ಪಹರೆ ಮಾಡತಕ್ಕಂಥ ರೀತಿಯಲ್ಲಿ ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದೇವೆ. ಮತ್ತು ಎಲ್‌ಟಿಟಿಈ ಆಕ್ಟಿವಿಟೀಸನ್ನು ಕರ್ಬ್ ಮಾಡತಕ್ಕಂಥ ರೀತಿಯಲ್ಲಿ ಕೇಂದ್ರ ಗೃಹಮಂತ್ರಿಗಳು ಕೂಡ ಇಲ್ಲಿ ಬಂದಾಗ, ಅವರೂ ಕೂಡ ಅದಕ್ಕೆ ಹೆಚ್ಚಿನ ಪೋಲೀಸ್ ಬಂದೋಬಸ್ತ್ ಬೇಕಾಗುತ್ತದೆ. ಕೇಂದ್ರ ಸರ್ಕಾರ ಅದಕ್ಕೆ ಸಹಾಯ ಮಾಡುತ್ತದೆನ್ನುವ ರೀತಿಯಲ್ಲಿ ಹೇಳಿದಾಗ, ಈಗಾಗಲೇ ನಮಗೆ 8 ಕೋಟಿ ರೂಪಾಯಿ ವೆಚ್ಚ ತಗಲಬಹುದೆಂದು ಅದಕ್ಕೆ ವ್ಯವಸ್ಥೆ ಮಾಡಬೇಕೆಂದು ಕಳುಹಿಸಿದ್ದೇವೆ.

ಈ ರೀತಿಯಾಗಿ ಕರ್ನಾಟಕ ರಾಜ್ಯದಲ್ಲಿ ಎಲ್‌ಟಿಟಿಇ ಆಕ್ಟಿವಿಟೀಸ್ ಬಗ್ಗೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ನಿಯಂತ್ರಣ ಮಾಡಿದೆ.

ಶ್ರೀ ಜಿ. ರಾಜುಗೌಡ:- ಎಲ್‌ಟಿಟಿಇ ಹಾವಳಿಯಿಂದ ರಾಜ್ಯದ ಯಾವ ಯಾವ ಪ್ರಮುಖ ವ್ಯಕ್ತಿಗಳಿಗೆ ರಕ್ಷಣೆ ಒದಗಿಸಲಾಗಿದೆ? ಎಲ್‌ಟಿಟಿಇ ಯವರು ಇಲ್ಲಿರತಕ್ಕ ಭಯೋತ್ಪಾದಕರಿಗೆ ಆಸ್ತ್ರಗಳನ್ನು ಒದಗಿಸುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ವೀರಪ್ಪನ್ ಬಲಗೈ ಭಂಟ ಗುರುನಾಥನ್ ಸತ್ತಾಗ ಅವನ ಹತ್ತಿರವಿದ್ದ ವಿದೇಶಿ ಮುದ್ರೆಯ ಬಂದೂಕನ್ನು ವಶಪಡಿಸಿಕೊಳ್ಳಲಾಗಿದೆ ಎಂದ ಮೇಲೆ ಎಲ್‌ಟಿಟಿಇ ಯವರಿಗೂ ಭಯೋತ್ಪಾದಕರಿಗೂ ಸಂಪರ್ಕವಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು:- ಯಾರ್ಯಾರಿಗೆ ರಕ್ಷಣೆ ಕೊಟ್ಟಿದ್ದಾರೆಂದು ಬಹಿರಂಗವಾಗಿ ಪ್ರಚಾರ ಮಾಡುವುದರಿಂದ ನಿಮಗೆ ಏನು ಅನುಕೂಲ? ಅದನ್ನು ಬಿಟ್ಟು ಬಾಕಿಯದಕ್ಕೆ ಉತ್ತರಿಸಬಹುದು.

ಶ್ರೀ ಜಿ. ರಾಜುಗೌಡ:- ವಿದೇಶಿ ಮುದ್ರೆಯುಳ್ಳ ಬಂದೂಕಿನಿಂದ ರಾಜ್ಯದ ಭಯೋತ್ಪಾದಕರಿಗೂ ಎಲ್‌ಟಿಟಿಇ.ಯವರಿಗೂ ನೇರ ಸಂಪರ್ಕ ಇದೆ ಎಂಬುದು ಗೊತ್ತಾಗುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಧರ್ಮಸಿಂಗ್:- ಕರ್ನಾಟಕ ರಾಜ್ಯದಲ್ಲಿ ಎಲ್‌ಟಿಟಿಇ ಯವರು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆಂದು ಸರ್ಕಾರಕ್ಕೆ ಇಂಟಲಿಜೆನ್ಸ್ ವಿಂಗ್‌ನಿಂದ ಗೊತ್ತಾಗಿದೆ. ಅವರು ಹೇಳಿದ ಹಾಗೆ ಗುರುನಾಥನ್ ಕೊಲೆಯಾದಾಗ ಒಂದು ವೆಪನ್ಸ್ ಸಿಕ್ಕಿದೆ. ಎಲ್ಲೆಲಿ ಯಾವ ಯಾವ ರೀತಿಯಲ್ಲಿ ಅದು ಬಂದಿದೆ ಎಂದು ಪತ್ತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆ ಬಗ್ಗೆ ಸರ್ಕಾರ ಹೆಚ್ಚಿನ ನಿಗಾವಹಿಸುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಇದು ರಾಜ್ಯಕ್ಕೆ ಸೀಮಿತವಾದ ಸಮಸ್ಯೆ ಅಲ್ಲ ಅಥವಾ ರಾಷ್ಟ್ರೀಯ ಸಮಸ್ಯೆಯೂ ಅಲ್ಲ. ಇದು ಒಂದು ಅಂತರಾಷ್ಟ್ರೀಯ ಸಮಸ್ಯೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೇಂದ್ರ ಸರ್ಕಾರದೊಡನೆ ರಾಜ್ಯ ಸರ್ಕಾರ ಸಮಾಲೋಚನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರ ಕಾಶ್ಮೀರ ಮತ್ತು ಪಂಜಾಬಿನ ಟೆರರಿಸ್ಟ್ ಆಕ್ಟಿವಿಟೀಸ್‌ಗೆ ಇಸ್ರೇಲಿ ಕಮ್ಯಾಂಡೋಸನ್ನು ಬಳಸತಕ್ಕಂಥ ಪ್ರಯತ್ನ ನಡೆದಿದೆ ಎಂದು ತಿಳಿದಿದ್ದೇನೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಯಾವ ರೀತಿ ಸಂಪರ್ಕ ಇಟ್ಟುಕೊಂಡಿದೆ? ರಾಜ್ಯದ ಪೋಲೀಸರಿಗೆ ಈ ಅಧಿಕಾರ ಬರುತ್ತದೋ ಇಲ್ಲವೋ ಎಂದು ನನಗೆ ಶಂಕೆ ಇದೆ. ಎರಡನೆಯದಾಗಿ ಮಾನ್ಯ ರಾಜುಗೌಡರು ಹೇಳಿದ ಹಾಗೆ ಕರ್ನಾಟಕದಲ್ಲಿ ನಡೆಯುತ್ತಿರತಕ್ಕ ಎಲ್‌ಟಿಟಿಇ ಚಟುವಟಿಕೆಗಳಿಗೂ ವೀರಪ್ಪನ್ ಸ್ಮಗ್ಲಿಂಗ್ ಆಕ್ಟಿವಿಟೀಸ್‌ಗೂ ಸಂಬಂಧ ಇದೆ ಎಂಬ ಬಗ್ಗೆ ಸಾಕಷ್ಟು ಸಾಕ್ಷಿ, ಪುರಾವೆಗಳು ಸಿಕ್ಕಿವೆ. ಅದಕ್ಕಾಗಿಯೇ ನಾವು ವೀರಪ್ಪನ್ ಕಾರ್ಯಾಚರಣೆಯನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿ ಬೆಳಸಿಕೊಳ್ಳದೆ ಅದನ್ನು ಸಿಬಿಐ. ತನಿಖೆಗೆ ಒಪ್ಪಿಸಿ ಎಂದು ಹಿಂದೆಯೇ ಹೇಳಿದೆವು. ಆದರೆ ನೀವು ಅದನ್ನು ಒಪ್ಪಿಕೊಳ್ಳಲಿಲ್ಲ. ಈ ಒಂದು ಕಾರಣಕ್ಕೆ ಈ ಸಮಸ್ಯೆಗಳ ಒಟ್ಟಾರೆ ವ್ಯಾಪ್ತಿಯನ್ನು ಗಮನಿಸಿ ಈಗಲಾದರೂ ಸಿಬಿಐ ತನಿಖೆ ಮಾಡತಕ್ಕ ಬಗ್ಗೆ ಕಾರ್ಯಪ್ರವೃತ್ತರಾಗುತ್ತೀರಾ? ಈ ವಿಚಾರದಲ್ಲಿ ನಿಮ್ಮ ಮತ್ತು ರಾಷ್ಟ್ರದ ಸರ್ಕಾರಗಳ ನೇರ ಸಂಪರ್ಕ ಮತ್ತು ಸಂಬಂಧ ಯಾವ ರೀತಿ ಇದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಧರ್ಮಸಿಂಗ್:- ಮಾನ್ಯ ವಿರೋಧ ಪಕ್ಷದ ನಾಯಕರು ಎಲ್‌ಟಿಟಿಇ ಆಕ್ಟಿವಿಟೀಸ್ ಬಗ್ಗೆ ನಮಗೂ ಮತ್ತು ಕೇಂದ್ರ ಸರ್ಕಾರಕ್ಕೆ ಯಾವ ರೀತಿ ಸಂಬಂಧ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಕಾಶ್ಮೀರದ, ಪಂಜಾಬಿನ ಟೆರರಿಸ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎಲ್‌ಟಿಟಿಇ ಆಕ್ಟಿವಿಟೀಸ್ ರಾಜ್ಯದಲ್ಲಿ ಪ್ರಾರಂಭವಾದ ಮೇಲೆ, ಶಿವರಾಸನ್ ಹತ್ಯೆ ಆದಮೇಲೆ ರಾಜ್ಯದಲ್ಲಿರತಕ್ಕ ಎಲ್‌ಟಿಟಿಇ ಆಕ್ಟಿವಿಟೀಸ್ ಬಗ್ಗೆ ಕೇಂದ್ರ ಸರ್ಕಾರ ಕೂಡ ಬಹಳ ಗಮನ ಹರಿಸಿದೆ. ಇದನ್ನು ನಿಯಂತ್ರಣ ಮಾಡುವ ಬಗ್ಗೆ ಕೇಂದ್ರ ಗೃಹ ಸಚಿವರ ಹತ್ತಿರ ನೇರವಾಗಿ ಸಮಾಲೋಚನೆ ಮಾಡಿದ್ದೇವೆ. ಇದು ಕೇವಲ ರಾಜ್ಯಕ್ಕೆ ಅಥವಾ ರಾಷ್ಟ್ರಕ್ಕೆ ಸಂಬಂಧಪಟ್ಟದ್ದು ಅಲ್ಲ, ಅಂತರಾಷ್ಟ್ರಕ್ಕೆ ಸಂಬಂಧಪಟ್ಟದ್ದು ಇದೆ. ಮತ್ತು ಶಿವರಾಸನ್ ಆಕ್ಟಿವಿಟೀಸ್‌ಗೆ ಯಾವ ರೀತಿಯಾದ ಸಂಬಂಧವಿದೆ ಎನ್ನುವುದು ಪತ್ರಿಕೆಯಲ್ಲಿ ಕೂಡ ಬಂದಿದೆ. ಇದರಲ್ಲೇನು ಮುಚ್ಚಿಡತಕ್ಕದ್ದು ಇಲ್ಲ. ಕರ್ನಾಟಕ ರಾಜ್ಯದಲ್ಲಿ ಇದರಲ್ಲೂ ಬೆಂಗಳೂರಿನಲ್ಲಿ 5–6 ತಿಂಗಳ ಹಿಂದೆ ಎಲ್‌ಟಿಟಿಇ ಆಕ್ಟಿವಿಟೀಸ್ ಪ್ರಾರಂಭವಾದಾಗ ಭಯದ ವಾತಾವರಣ ಇತ್ತು. ನಾವು ಕ್ರಮ ತೆಗೆದುಕೊಂಡ ಮೇಲೆ ಅದು ಇಲ್ಲ. ವೀರಪ್ಪನ್ ವಿಚಾರದಲ್ಲಿ ಕೂಡ, ಆ ಒಂದು ಗ್ಯಾಂಗ್‌ನಲ್ಲಿ ಎಲ್‌ಟಿಟಿಇಗೆ ಸಂಬಂಧಪಟ್ಟ ಕೆಲವು ಜನರು ಇದ್ದಾರೆಂದು ಹೇಳಿದ್ದಾರೆ. ಇದನ್ನು ಸಿಬಿಐಗೆ ವಹಿಸಿಕೊಡಬೇಕೆಂದು ಸರ್ಕಾರಕ್ಕೆ ಮನವಿ ಬಂದಿದೆ.

ಅದರ ಬಗ್ಗೆ ಕೂಡ ವಿಚಾರ ಮಾಡೋಣ. ಇವತ್ತು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವೀರಪ್ಪನ್‌ನನ್ನು ಹಿಡಿಯತಕ್ಕ ರೀತಿಯಲ್ಲಿ ವಿಧಾನಸಭೆಯಲ್ಲಾಗಲೀ, ವಿಧಾನಸಭೆಯ ಹೊರಗಡೆ ಆಗಲೀ, ಸರ್ಕಾರದವರು ನಿಲುವು ತೆಗೆದುಕೊಂಡಿದ್ದೇವೆ, ಇವತ್ತು ಬಹಳ ಹತ್ತಿರಕ್ಕೆ ಬಂದಿದ್ದೇವೆ. ವೀರಪ್ಪನ್‌ನನ್ನು ಹಿಡಿಯತಕ್ಕ ಕಾರ್ಯಾಚರಣೆ ವಿಚಾರದಲ್ಲಿ ಬಹಿರಂಗವಾಗಿ ವಿಧಾನಸಭೆಯಲ್ಲಿ ಮತ್ತು ನೇರೆ ಕಡೆಯಲ್ಲಿ ಹೇಳತಕ್ಕದ್ದಲ್ಲ. ಇವತ್ತು 18 ಜನರ ಏನು ಗ್ಯಾಂಗ್ ಇದೆ 5 ಜನ ವೀರಪ್ಪನ್‌ಗೆ ಬಹಳ ಹತ್ತಿರದಲ್ಲಿ ಸಹಾಯ ಮಾಡತಕ್ಕ ರೀತಿಯಲ್ಲಿ ಗುರುನಾಥ್ ಕೂಡ ಒಬ್ಬ ಇದ್ದು ಆತನನ್ನು ಹಿಡಿಯತಕ್ಕ ರೀತಿಯಲ್ಲಿ ಈಗಾಗಲೇ ಒಬ್ಬರು ಐ.ಜಿ. ಇದ್ದಾರೆ ಮತ್ತೆ ಎಸ್.ಪಿ.ಯವರನ್ನು ಸ್ಪೆಷಲ್ ಡ್ಯೂಟಿಯಲ್ಲಿ ಹಾಕಿದ್ದೇವೆ. ವೀರಪ್ಪನ್‌ನನ್ನು ಹಿಡುಯತಕ್ಕಮ್ಮ ಹತ್ತಿರಕ್ಕೆ ಬಂದಿದೆ. 2 ಸಾವಿರ ಚದರ ಮೀಟರ್ ಫಾರೆಸ್ಟ್ ಸಮ್ಮಲ್ಲಿದ್ದರೆ, 4 ಸಾವಿರ ಚದರಮೀಟರ್ ತಮಿಳುನಾಡಿನಲ್ಲಿದೆ. ಅವರ ಸಹಕಾರ ಕೂಡ ಬೇಕಾಗಿದೆ. ಈ ತರಹ ತಮಿಳುನಾಡು ಜೊತೆ, ಕೇರಳದ ಜೊತೆ, ಬೇರೆ ಕಡೆ ಪರಸ್ಪರ ಅಧಿಕಾರಿಗಳ ಸಂಪರ್ಕ ಇಟ್ಟುಕೊಂಡಿದ್ದೇವೆ. ತಾವು ಎಲ್.ಟಿ.ಟಿ.ಇ. ಆಕ್ಟಿವಿಟೀಸ್‌ಗೆ ಸಂಬಂಧಿಸಿದ ವಿಚಾರ ಹೇಳಿದ್ದೀರಿ. ಅದರ ಬಗ್ಗೆ ಕೂಡ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ:- ಸನ್ಮಾನ್ಯ ಸಭಾಧ್ಯಕ್ಷರೆ, ಎಲ್.ಟಿ.ಟಿ.ಇ.ಯವರನ್ನು ಗುರುತಿಸುವುದಕ್ಕೆ ನಮ್ಮ ಮಂತ್ರಿಗಳು ಕೊಟ್ಟಿರುವ ಉತ್ತರದ ಪ್ರಕಾರ ಏನು ಕಾರ್ಯಕ್ರಮ ಹಾಕಿದ್ದಾರೆ ಅದು ಕಾರ್ಯಕ್ರಮವೇ ಇಲ್ಲ ಎಂದು ನನ್ನ ಭಾವನೆ. ಕಳೆದ ಸಾರಿಯೂ ಉತ್ತರ ಹೇಳಿದ್ದರು, ಫಾರಿನರ್ಸ್ ಆಕ್ಟ್ ಅಡಿಯಲ್ಲಿ ಎಲ್.ಟಿ.ಟಿ.ಇ. ಯವರು ಎಂದು ಯಾರಿದ್ದಾರೆ ಅವರು ಇಲ್ಲಿ ನೋಂದಾವಣೆ ಮಾಡಿಕೊಳ್ಳಬೇಕೆಂಬ ಕಾರ್ಯಕ್ರಮ ಹಾಕಿದ್ದಾರೆ. ನಿನ್ನೆ ಶ್ರೀಲಂಕಾದಿಂದ ಬಂದಂಥ ತಮಿಳ ಒಬ್ಬನಿಗೂ, ಕೊಳ್ಳೇಗಾಲದಲ್ಲಿ ಇರುವ ತಮಿಳನಿಗೂ ಏನೂ ವ್ಯತ್ಯಾಸ ಕಾಣದೇ ಇರುವಂಥ ವಾಸ್ತವ ಸ್ಥಿತಿ ಇವತ್ತು ಇದೆ. 50 ವರ್ಷಗಳ ಹಿಂದೆ ಬಂದಂಥ ತಮಿಳರು ಶಿವಾಜಿನಗರದಲ್ಲಿದ್ದಾರೆ. ನಿನ್ನೆ ಮೊನ್ನೆ ಶ್ರೀಲಂಕಾದಿಂದ ಯಾರಾದರೂ ತಮಿಳರು ಬಂದರೆ ನಿನ್ನೆ ಮೊನ್ನೆ ಬಂದರೋ ಅಥವಾ 50 ವರ್ಷಗಳ ಹಿಂದೆ ಬಂದರೋ ಏಂದು ಗೊತ್ತಾಗುವುದಿಲ್ಲ. ಆ ಕಾರಣದಿಂದ ಯಾವ ರೀತಿ ಎಲ್.ಟಿ.ಟಿ.ಇ. ಏಂದು ಗುರುತಿಸುತ್ತಾರೋ ನನಗಂತೂ ಗೊತ್ತಾಗುವುದಿಲ್ಲ. ಆ ಕಾರಣ ಕೇಂದ್ರದ ಜೊತೆ ಮಾತನಾಡಿ ಏಂದು ಸುಲಭ ಮಾರ್ಗ ಉಂಟು, ಒಂದು ಶಿಸ್ತಿಗೆ ಬರುವುದಕ್ಕೆ. ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿದೆ, ಬೇರೆ ದೇಶಗಳಲ್ಲಿ ಫ್ಯಾಮಿಲಿ ಬುಕ್ಸ್ ಎಂದು ಉಂಟು. ಆ ದಾಖಲೆ ಮೇಯರ್ಸ್ ಮತ್ತು ಪೋಲೀಸರ ಹತ್ತಿರ ಇರುತ್ತದೆ, ಸ್ಟೇಟ್ ಪೋಲೀಸ್ ಹತ್ತಿರವೂ ಇರುತ್ತದೆ. ಒಬ್ಬ ಮನುಷ್ಯ ಮದುವೆ ಆದಕೂಡಲೇ ಫಾಮಿಲಿ ಬುಕ್ ಎಂದು ತೆಗೆಯುತ್ತಾರೆ. ಈಗಾಗಲೇ ನಮಗೆಲ್ಲಾ ಪಟ್ಟಾ ಪುಸ್ತಕ ಕೊಟ್ಟಿದ್ದೀರಿ. ಅಂದರೆ ಸಮಸ್ಯೆ ಸುಮಾರು 75 ಬಾಗ ಬಗೆಹರಿದಿದೆ. ಕರ್ನಾಟಕದ ಜನಸಂಖ್ಯೆ ಏನಿದೆ ಅದರಲ್ಲಿ 25 ಭಾಗ ಜನರಿಗೆ ಮಾತ್ರ ಫ್ಯಾಮಿಲಿ ಬುಕ್ ಕೊಡುವ ವ್ಯವಸ್ಥೆ ಮಾಡಿದರೆ ಬರೀ ಎಲ್.ಟಿ.ಟಿ.ಇ. ನಿಯಂತ್ರಣಕ್ಕೆ ಬೇಕಾದ ಶಿಸ್ತು ಒಂದೇ ಅಲ್ಲ, ಬೇರೆ ಎಲ್ಲಾ ಉದ್ದೇಶಗಳನ್ನು ಸಾಧನೆ ಮಾಡುವಂಥ ಒಂದು ಶಿಸ್ತಿಗೆ ಬರುವಂಥ ವ್ಯವಸ್ಥೆಯಾಗುತ್ತದೆ. ಆ ಕಾರಣ ಫ್ಯಾಮಿಲಿ ಬುಕ್ ಇಂಟ್ರೊಡ್ಯೂಸ್ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ನಮ್ಮವರು ಯಾರು, ಹೊರಗಿನಿಂದ ಬಂದವರು ಯಾರು ಎಂಬುದನ್ನು ಬಹಳ ಸುಲಭವಾಗಿ ಪತ್ತೆ ಹಚ್ಚಬಹುದು. ಅವರು ಪಂಜಾಬಿನಿಂದಲೇ ಬರಲಿ, ಕಾಶ್ಮೀರದಿಂದಲೇ ಬರಲಿ, ಶ್ರೀಲಂಕಾದಿಂದಲೇ ಬರಲಿ. ಇದಕ್ಕೇನೂ ಹಣ ಜಾಸ್ತಿ ಖರ್ಚಾಗುವುದಿಲ್ಲ, ಇದರಿಂದ ಬಹಳ ಪ್ರಯೋಜನಗಳು ಉಂಟು. ಆದ್ದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕು.

ಶ್ರೀ ಧರ್ಮಸಿಂಗ್:- ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ಕೂಡ ಪರಿಶೀಲನೆ ಇಲ್ಲ. ಅವಶ್ಯವೆನಿಸಿದರೆ ನಮಗೆ ಎಷ್ಟು ವೆಚ್ಚವಾಗುತ್ತದೆಂದು ನೋಡಿ ಫ್ಯಾಮಿಲಿ ಬುಕ್ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಗುಲ್ಬರ್ಗಾ ನಗರಕ್ಕೆ ಭೀಮಾ ನದಿಯಿಂದ ಕುಡಿಯುವ ನೀರಿನ ಯೋಜನೆ.

111(505) ಶ್ರೀ ಖಿಮರುಲ್ ಇಸ್ಲಾಮ್ (ಗುಲ್ಬರ್ಗಾ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?